**ಸಾಕ್ಷಿಗೆ ದಿನಾಂಕ 26-03-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀಮತಿ ಟಿ ಎಲ್ ವಕೀಲರಿಂದಃ</u>

1. ನಾನು ಈ ಪ್ರಕರಣದಲ್ಲಿ, ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 1 | ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ |
| ನಿ.ಪಿ 2 | ಪ್ರಥಮ ಹೇಳಿಕೆಯ ದೃಢೀಕೃತ ಪ್ರತಿ |
| ನಿ.ಪಿ 3 | ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ |
| ನಿ.ಪಿ 4 | ಕಲಂ 133 ರಡಿ ನೀಡಿದ ನೋಟೀಸು ದೃಢೀಕೃತ ಪ್ರತಿ |
| ನಿ.ಪಿ 5 | ಕಲಂ 133 ರಡಿ ನೀಡಿದ ನೋಟೀಸಿಗೆ ಉತ್ತರ ದೃಢೀಕೃತ ಪ್ರತಿ |
| ನಿ.ಪಿ 6 ರಿಂದ 8 | 3 ಎಂ ವಿ ಐ ವರದಿಗೆ ಮನವಿ ಪತ್ರಗಳ ದೃಢೀಕೃತ ಪ್ರತಿಗಳು |
| ನಿ.ಪಿ 9 ರಿಂದ 11 | 3 ಎಂ ವಿ ಐ ವರದಿಯ ದೃಢೀಕೃತ ಪ್ರತಿಗಳು |
| ನಿ.ಪಿ 12 | ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 13 | ದೋಷಾರೋಪಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 14 | ಡಿಸ್ಚಾರ್ಜ್ ಸಮರಿ |

| | |
|---|---|
| | |
| ನಿ.ಪಿ 15 | 7 ಮೆಡಿಕಲ್ ಬಿಲ್ಲುಗಳು ಮೊತ್ತ ರೂ.6,55,783/- (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 7 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 16 | 7 ಔಷಧಿ ಚೀಟಿಗಳು (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 7 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 17 | 4 ಮುಂಗಡ ಹಣ ಪಾವತಿ ರಶೀದಿಗಳು |
| ನಿ.ಪಿ 18 | ಆಧಾರ್ ಕಾರ್ಡ್‌ನ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 19 | ಡಿಎಲ್ ನ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 20 | ಎಕ್ಸ್ ರೇ |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀಸವಾಲು: 1 ನೇ ಎದುರುದಾರರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**